ನಿಮಗೆ ಇಂಗ್ಲಿಷ್ ಚೆನ್ನಾಗಿ ಗೊತ್ತು. 'ನಾನು ಈ ಕೆಲಸ ಪೂರ್ಣಗೊಳಿಸದೆ, ಮತ್ತೆ ನಾನು ಈ ಕೆಲಸ ಮುಗಿಸಿದೆ.' ಈ ಎರಡು ವಾಕ್ಯಗಳ ವ್ಯತ್ಯಾಸ ತಿಳಿಸಿ. ನನಗ್ಯಾಕೋ ಈ ಎರಡೂ ಪದಗಳ ಅರ್ಥ ಒಂದೇ ಅನಿಸುತ್ತಿದೆ ಎಂದು ಹೆಂಡತಿ ಗಂಡನನ್ನು ಪ್ರಶ್ನಿಸಿದಳು. ಅದಕ್ಕೆ ಗಂಡ, 'ನನಗೂ ಹಾಗೇ ಅನಿಸುತ್ತೆ. ನೀನು ನನ್ನ ಜೀವನದಲ್ಲಿ ಪ್ರವೇಶಿಸಿ ಎಲ್ಲವನ್ನೂ ಪರಿಪೂರ್ಣಗೊಳಿಸಿದೆ. ನೀನು ನನ್ನ ಜೀವನದಲ್ಲಿ ಅಡಿಇಟ್ಟೆ ಬಳಿಕ ನನ್ನ ಜೀವನವೆಲ್ಲವೂ ಮುಗಿಯಿತು'!

***

50ನೇ ವರ್ಷದ ವೈವಾಹಿಕ ಜೀವನದ ವಾರ್ಷಿಕೋತ್ಸವದಂದು ಗಂಡನ ಕಣ್ಣಲ್ಲಿ ಕಣ್ಣೀರು ಕಂಡ ಹೆಂಡತಿ ಹೀಗೆ ಕೇಳಿದಳು ಇಷ್ಟೊಂದು ಭಾವುಕರಾದರೆ ಹೇಗೆ? ಅದಕ್ಕೆ ಗಂಡ 50 ವರ್ಷಗಳ ಹಿಂದೆ ನಾನು ನೀನು ಪಾರ್ಕಿನಲ್ಲಿ ಭೇಟಿಯಾಗಿದ್ದಾಗ ನಿಮ್ಮನ ಕೈಗೆ ಸಿಕ್ಕಿಬಿದ್ದಿದ್ದೆವು. ಆಗ ಅವರು, 'ನನ್ನ ಮಗಳನ್ನು ಲಗ್ನ ಆಗ್ತೀಯಾ? ಇಲ್ಲಂದ್ರೆ 50ವರ್ಷ ಜೈಲಿಗೆ ಹಾಕಿಸ್ತಾ' ಎಂದು ಬೆದರಿಕೆ ಹಾಕಿದ್ರು. ಆಗಲೇ ಜೈಲಿಗೆ ಹೋಗಿದಿದ್ರೆ ಇಂದು ಬಿಡುಗಡೆ ಆಗ್ತಿತ್ತು. ಅದನ್ನು ನೆನೆದು ಕಣ್ಣೀರು ಬಂತು ಎಂದ.




***

ಟೀಚರ್ ಪಾರ್ವತಿಯು ಶಿವನನ್ನೇ ಮೆಚ್ಚಿ ಏಕೆ ಮದುವೆಯಾದಳು ಎಂದು ಪ್ರಶ್ನಿಸಿದರು. ವಿದ್ಯಾರ್ಥಿ ಶಿವನು ದಿಗಂಬರನಾಗಿರುವುದುರಿಂದ ಬಟ್ಟೆ ಒಗೆಯುವ ಕೆಲಸವಿಲ್ಲ. ತಲೆಯ ಮೇಲೆ ಗಂಗೆ ಇರುವುದರಿಂದ ನೀರಿನ ಸಮಸ್ಯೆ ಇಲ್ಲ. ಜಟೆಯಲ್ಲಿ ಚಂದಿರನಿರುವುದರಿಂದ ವಿದ್ಯುತ್ ಬಿಲ್ ಕಟ್ಟಬೇಕೆನ್ನುವ ಉಸಾಬರಿಯಿಲ್ಲ. ಸಸ್ಯಾಹಾರಿಯಾಗಿರುವುದರಿಂದ ಅಡುಗೆ ಕೆಲಸವೂ ಅಷ್ಟೊಂದು ಇರುವುದಿಲ್ಲ. ಸಲಾಡ್ ಮತ್ತು ಹಣ್ಣುಗಳೇ ಸಾಕು. ತಂದೆ ತಾಯಿಯಿಲ್ಲದಿರುವುದರಿಂದ ಅತ್ತೆ–ಮಾವನ ಸೇವೆಯೂ ಮಾಡುವಂತಿಲ್ಲ. ಈ ಎಲ್ಲಾ ಕಾರಣದಿಂದ ಪಾರ್ವತಿಯು ಶಿವನನ್ನು ಮದುವೆಯಾದಳು. ಉತ್ತರ ಕೇಳಿದ ಟೀಚರ್ ಮೂರ್ಛೆ ಹೋದಳು.

***

ಗುಂಡ ಮತ್ತು ಗುಂಡಿ ವಾಕಿಂಗ್ ಹೋಗುತ್ತಿದ್ದರು. ಎದುರಿಗೆ ಭೂಲೋಕದ ಸುಂದರಿ ಸುಳಿದಳು. ಅದನ್ನು ಕಂಡ ಗುಂಡಿ, ರೀ... ಅಲ್ನೋಡಿ ಆಕೆ ಎಷ್ಟೊಂದು ಸುಂದರವಾಗಿದ್ದಾಳೆ' ಎಂದಳು. ಉತ್ತರಿಸಲು ಮುಂದಾದ ಗುಂಡನಿಗೆ ತಟ್ಟನೆ ತಾನು ತ್ರಿಶಂಕು ಸ್ಥಿತಿಯಲ್ಲಿ ಸಿಕ್ಕಿರುವುದು ನೆನಪಾಯಿತು. ಗುಂಡಿಯ ಪ್ರಶ್ನೆಗೆ ಹೌದು ಎಂದು ಉತ್ತರಿಸಿದರೆ ಅವಳ ದೃಷ್ಟಿಯಲ್ಲಿ ತಾನು ಪರಸ್ತ್ರೀಯ ವ್ಯಾಮೋಹಿ ಎಂದಾಗುತ್ತದೆ. ಇಲ್ಲ ಎಂದರೆ ಆತ್ಮವಂಚನೆ ಮಾಡಿಕೊಂಡಾಗುತ್ತದೆ. ಅದಕ್ಕೆ ಗುಂಡ ಉಪಾಯ ಮಾಡಿ 'ಯಾರು' ಎಂದು ಕೇಳಿ ಮುಂದೆ ಸಾಗಿದ.

***

ಬೆಂಗಳೂರಿನಲ್ಲಿ ಮಳೆಯಿಂದಾದ ಅವಾಂತರಗಳು ಒಂದೆರಡಲ್ಲ. ಇದಕ್ಕೆ ಸಾಕ್ಷಿ ಇಂತಿದೆ... ಬ್ರೋಕರ್ ಕನ್ಯೆಯು ಮನೆಗೆ ಬಂದು ವರನ ಫೋಟೊ ತೋರಿಸಿ, 'ಹುಡುಗ ತುಂಬಾ ಅನುಕೂಲಸ್ಥ, 15ನೇ ಅಂತಸ್ತಿನಲ್ಲಿ ಒಂದು ಫ್ಲಾಟ್ ಇದೆ. ಮಳೆಗಾಲದಲ್ಲಿ ಬೆಂಗಳೂರಿನಲ್ಲಿ ಓಡಾಡಲು ಎರಡು ದೋಣಿಗಳಿವೆ' ಎಂದ. ಅದನ್ನು ಕೇಳಿದ ಹುಡುಗಿ ಅಪ್ಪ–ಅಮ್ಮನ ಮಾತಿಗೂ ಕಾಯದೆ ಹುಡುಗ ಒಕೆ ಅಂದಳು!

***

ಗುಂಡ ಪಕ್ಷಮಾಸದ ವೇಳೆ ಪೂಜೆ ಸಲ್ಲಿಸಿ, ಅಪ್ಪನಿಗೆಂದು ಅಮ್ಮ ವಿಶೇಷವಾಗಿ ಮಾಡಿದ್ದ ಪಾಯಸವನ್ನು ತೆಗೆದುಕೊಂಡು ಟೆರೇಸ್‌ಗೆ ಹೋದ. ಜೊತೆಗೆ ಅಮ್ಮನೂ. ಅಷ್ಟರಲ್ಲಾಗಲೇ ಕಾಗೆಯೊಂದು ಕಾಯುತ್ತಿತ್ತು. ಅದನ್ನು ಕಂಡ ಅಮ್ಮ, 'ನಿಮ್ಮಪ್ಪನಿಗೆ ನಾನು ಮಾಡುವ ಪಾಯಸ ಅಂದ್ರೆ ತುಂಬಾ ಇಷ್ಟ. ಘಮಲು ಹಿಡಿದುಕೊಂಡು ನಮಗಿಂತ ಮೊದಲೇ ಕಾಗೆ ರೂಪದಲ್ಲಿ ಬಂದುಬಿಟ್ಟಿದ್ದಾನೆ' ಅಂದಳು. ಪಾಯಸವಿಟ್ಟು ದೂರ ಬಂದರೂ ಕಾಗೆ ಪಾಯಸದತ್ತ ಮೂಸಿಯೂ ನೋಡಲಿಲ್ಲ. ಸ್ವಲ್ಪಹೊತ್ತಿನಲ್ಲೇ ಪಕ್ಕದ ಮನೆ ಪಲ್ಲು ತಾನು ಮಾಡಿದ್ದ ಕೇಸರಿಬಾತ್ ತಂದು ಟೆರೇಸ್ ಮೇಲಿಟ್ಟಳು. ಅದನ್ನು ಕಂಡ ಕಾಗೆ ಕೂಡಲೇ ಪುರ್ ಎಂದು ಅಲ್ಲಿಗೆ ಹಾರಿತು. ಅದಕ್ಕೆ ಕೆಂಡಕಾರಿದ ಗುಂಡನ ಅಮ್ಮ, 'ಥು ನಿಮ್ಮಪ್ಪನಿಗೆ ಏನೋ ಬಂದಿರೋದು. ಸತ್ತ ಮೇಲೂ ಅವಳ ಮೇಲಿನ ವ್ಯಾಮೋಹ ಕಡಿಮೆಯಾಗಲಿಲ್ಲ' ಎಂದು ಕಿಡಿಕಾರಿದಳು! ಅದಕ್ಕೆ ಗುಂಡ, 'ಸತ್ತ ಮೇಲಾದರೂ ಅಪ್ಪ ಸ್ವತಂತ್ರವಾಗಿ ಇರಲಿ ಬಿಡಮ್ಮ' ಎಂದ!

***

ಸಂವಾದಕ್ಕಿಳಿದಿದ್ದ ಗುಂಡ ಹೀಗೆಂದ– ಮುಖ ಚಹರೆ ಹೋಲುವವರು ಅಣ್ಣ–ತಮ್ಮಂದಿರು. ಒಂದೇ ವಿಚಾರ ಹೊಂದಿರುವವರು ಆಪ್ತ ಮಿತ್ರರು. ನಡುವೆ ಬಾಯಿ ಹಾಕಿದ ಸುಬ್ಬ, 'ಚಹರೆ, ವಿಚಾರ ಬೇರೆ ಬೇರೆ ಉಳ್ಳವರು ಯಾರು' ಎಂದು ಪ್ರಶ್ನಿಸಿದ. ತಡಮಾಡದ ಗುಂಡ, 'ಗಂಡ–ಹೆಂಡತಿ' ಎಂದ!

ಸಂಗ್ರಹ: ಶಿವಮೊಗ್ಗ ರಮೇಶ್, ಮೈಸೂರು

